ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾವು ಜೀರ್ಣೋದ್ಧಾರಕ್ಕೆಂದು ಪ್ರತಿ ವರ್ಷ ಮುಜರಾಯಿ ಇಲಾಖೆಗೆ 5 ಲಕ್ಷ, 10 ಲಕ್ಷ ರೂಪಾಯಿಗಳವರೆಗೆ ಒಂದು ಪ್ರಪೋಸಲ್‌ನ್ನು ಕೊಟ್ಟಿರುತ್ತೇವೆ. ಆದರೆ ನಮಗೆ ಕಳೆದ ಮೂರು ವರ್ಷಗಳಲ್ಲಿ ಕೇವಲ 2 ಲಕ್ಷ 40 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ರೀತಿ ತಾರತಮ್ಯವಾಗುತ್ತಿದೆ. ಈ ತಾರತಮ್ಯವನ್ನು ಸರಿಪಡಿಸಿ ಎಲ್ಲಾ ಕ್ಷೇತ್ರಗಳಿಗೆ ಸಮನಾಗಿ ಹಂಚಿಕೆ ಮಾಡಬೇಕೆಂದು ಮಾನ್ಯ ಸಚಿವರನ್ನು ತಮ್ಮ ಮುಖೇನ ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಸ್ವಾಮಿ ಸಿದ್ದು ಸವದಿಯವರೆ, ನನ್ನ ಕ್ಷೇತ್ರಕ್ಕೆ ಕೊಟ್ಟೇ ಇಲ್ಲಾ ಸ್ವಾಮಿ. ನಿಮಗೆ 2 ಲಕ್ಷ 40 ಸಾವಿರ ರೂಪಾಯಿಗಳನ್ನಾದರೂ ಕೊಟ್ಟಿದ್ದಾರೆ. ನಮಗೆ ಕೊಟ್ಟೇ ಇಲ್ಲವಲ್ಲಾ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಈ ಹಣವನ್ನು ಮೂರು ವರ್ಷಗಳಲ್ಲಿ ಕೊಟ್ಟಿರುವುದು. ಒಂದೊಂದು ದೇವಸ್ಥಾನಕ್ಕೆ 20 ಸಾವಿರ, 25 ಸಾವಿರ ಕೊಟ್ಟಿರುವುದು ಒಟ್ಟು ಮೂರು ವರ್ಷಗಳಲ್ಲಿ ಕೊಟ್ಟಿರುವುದು. ಒಟ್ಟು 2 ಲಕ್ಷ 40 ಸಾವಿರದಲ್ಲಿ ಕೇವಲ 65 ಸಾವಿರ ಖರ್ಚಾಗಿರುವುದು.

ಅಧ್ಯಕ್ಷರು : ಸಚಿವರು ಉತ್ತರ ಹೇಳುತ್ತಾರೆ ತಾಳಿ.

ಶ್ರೀ ಬಿ. ನಾಗರಾಜಶೆಟ್ಟಿ : ಮಾಡುತ್ತೇವೆ ಸಾರ್.

ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ ವಿತರಣೆ

183 (991) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ರೈತರಿಗೆ ಅಡಚಣೆ ಇಲ್ಲದಂತೆ ಬಿತ್ತನೆ ಬೀಜವನ್ನು ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ರಾಜ್ಯದಲ್ಲಿ ಈಗಾಗಲೇ ಮುಂಗಾರು ಆರಂಭವಾಗಿದ್ದು, ಈ ಸಾಲಿನಲ್ಲಿ ಇಲ್ಲಿಯವರೆವಿಗೆ ಪ್ರತಿ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಬಿತ್ತನೆ ಬೀಜವನ್ನು ರೈತರಿಗೆ ಪೂರೈಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು;

ಇ) ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ (ಉದಾ: ಹೆಚ್.ಡಿ. ಕೋಟೆಯಲ್ಲಿ ಇತ್ತೀಚೆಗೆ ಈ ವಿಷಯವಾಗಿ ಉಂಟಾದ ಗಲಭೆ) ಸಕಾಲಕ್ಕೆ ಬಿತ್ತನೆ ಬೀಜ ಲಭ್ಯವಾಗದೇ/ ದಾಸ್ತಾನಿಲ್ಲದೆ ರೈತರು ತೊಂದರೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣರಾದ ಬೀಜ ನಿಗಮದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಉ) ಕೃಷಿ ಇಲಾಖೆಯಲ್ಲಿ ಹಣದ ಅಭಾವದಿಂದಾಗಿ ಬಿತ್ತನೆ ಬೀಜ ಪೂರೈಕೆಯಲ್ಲಿ ತೊಂದರೆಯಾಗುತ್ತಿರುವುದು ನಿಜವೇ;

ಊ) ಕೃಷಿ ವಲಯಕ್ಕೆ ಈ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ; ಈ ಪೈಕಿ ಇಲ್ಲಿಯವರೆವಿಗೆ ಬಿಡುಗಡೆಯಿಂದ ಹಣವೆಷ್ಟು; ಕಳೆದ ಸಾಲಿನ ಆಯವ್ಯಯದಲ್ಲಿ ಈ ವಲಯಕ್ಕೆ ನಿಗದಿಪಡಿಸಲಾದ ಹಣವೆಷ್ಟು;

ಋ) ಕೆಲವು ಸಂಸ್ಥೆಗಳು ಕಳಪೆ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಎ) ಹಾಗಿದ್ದಲ್ಲಿ ಇಂತಹ ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜವನ್ನು ಪೂರೈಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಜಿಲ್ಲಾವಾರು ಬಿತ್ತನೆ ಬೀಜದ ಬೇಡಿಕೆ ವಿವರಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮತ್ತು ಬೀಜ ವಿತರಣ ಸಂಸ್ಥೆಗಳಿಗೆ ಕಳುಹಿಸಿ ಸಕಾಲಕ್ಕೆ ಪೂರೈಸಲು ವ್ಯವಸ್ಥೆ ಮಾಡಲಾಗಿದೆ.
2. ಬೀಜೋತ್ಪದಕರ ಮತ್ತು ವಿತರಕರ ಮಾಸಿಕ ಸಭೆಯಲ್ಲಿ ಪ್ರಗತಿಯನ್ನು ಚರ್ಚಿಸಿ ಬೀಜ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ.
3. ಸ್ವಪರಾಗಸ್ಪರ್ಶ ಬೆಳೆಗಳಲ್ಲಿ ಹೆಚ್ಚಿನ ಬೇಡಿಕೆಯನ್ನು ಪೂರೈಸಲು ಬೀಜ ಗ್ರಾಮ ಯೋಜನೆಯಲ್ಲಿ ಉತ್ಪಾದಿಸಿರುವ ಮತ್ತು ರೈತರಲ್ಲಿ ಲಭ್ಯವಿರುವ ಗುಣಮಟ್ಟದ ಬೀಜಗಳನ್ನು ಬೀಜ ವಿಶ್ಲೇಷಣೆ ನಂತರ ವಿತರಣೆಗೆ ಬಳಸಿಕೊಳ್ಳಲು ತಿಳಿಸಲಾಗಿದೆ.
4. ಬೀಜಗಳ ಬೇಡಿಕೆ ಮತ್ತು ಸರಬರಾಜು ಬಗ್ಗೆ ಕೇಂದ್ರ ಕಛೇರಿಯಲ್ಲಿ ಪ್ರತಿದಿನ ಮಾಹಿತಿ ಪಡೆದು ವಿಮರ್ಶಿಸಲಾಗುತ್ತದೆ.

ಆ) ಈವರೆಗೆ ಜಿಲ್ಲಾವಾರು ವಿತರಿಸಿರುವ ಬೀಜದ ಪ್ರಮಾಣ ಹಾಗೂ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಮುಂಗಾರು ಹಂಗಾಮು ಪ್ರಾರಂಭದಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯಲ್ಲಿ ಸಂಕರಣ ಹತ್ತಿ ಡಿಸಿಹೆಚ್–32 ಬಿತ್ತನೆ ಬೀಜದ ಹೆಚ್ಚಿನ ಬೇಡಿಕೆಯಿಂದ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು. ನಂತರ ಬೇಡಿಕೆಗೆ ಪೂರಕವಾಗಿ ಸಂಕರಸ ಹತ್ತಿ ಬೀಜವನ್ನು ಪೂರೈಸಲಾಗಿರುತ್ತದೆ.

ಈ) ಬೇಡಿಕೆಯ ಪ್ರಕಾರ ಬೀಜವನ್ನು ಪೂರೈಸಿರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಕೃಷಿ ವಲಯಕ್ಕೆ 2006–07ನೇ ಸಾಲಿನ ಆಯವ್ಯಯದಲ್ಲಿ ಯೋಜನೆ/ ಯೋಜನೇತರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಒಳಗೊಂಡಂತೆ ಒಟ್ಟು 49648.60 ಲಕ್ಷಗಳ

ಅನುದಾನವನ್ನು ಕಲ್ಪಿಸಲಾಗಿದೆ. ಈ ಅನುದಾನದಲ್ಲಿ ಇಲ್ಲಿಯವರೆಗೆ 2088.55 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. 2005–06ನೇ ಸಾಲಿನಲ್ಲಿ ಆಯವ್ಯಯದಲ್ಲಿ ಈ ವಲಯಕ್ಕೆ ರೂ. 44654.90 ಲಕ್ಷಗಳ ಅನುದಾನ ನಿಗದಿಪಡಿಸಲಾಗಿತ್ತು.

ಖ) ವಿಷಯವು ತನಿಖೆಯಲ್ಲಿದೆ.

ಎ) ತನಿಖಾ ವರದಿ ಬಂದ ನಂತರ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

2006ರ ಮುಂಗಾರು ಹಂಗಾಮಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣಾ ಪ್ರಗತಿ

ದಿನಾಂಕ: 24–6–2006ರ ಅಂತ್ಯಕ್ಕೆ ಭೌತಿಕ: ಕ್ವಿಂಟಾಲುಗಳಲ್ಲಿ, ಆರ್ಥಿಕ: ಲಕ್ಷ ರೂ.ಗಳಲ್ಲಿ

ಕ್ರ.ಸಂ.	ಜಿಲ್ಲೆ	ಗುರಿ		ವಿತರಣೆಯ ಪ್ರಗತಿ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1.	ಬೆಂಗಳೂರು ನಗರ	1013	11.85	12	0.11
2.	ಬೆಂಗಳೂರು (ಗ್ರಾ)	4407	55.11	376	3.74
3.	ಕೋಲಾರ	6979	113.49	3408	48.78
4.	ತುಮಕೂರು	13445	204.89	29362.80	351.79
5.	ಶಿವಮೊಗ್ಗ	14196	223.61	11444.22	274.16
6.	ಚಿತ್ರದುರ್ಗ	11568	276.30	5419.00	237.94
7.	ದಾವಣಗೆರೆ	17826	411.86	21759.99	647.31
8.	ಮೈಸೂರು	12544	407.15	1583.12	391.10
9.	ಚಾಮರಾಜನಗರ	4423	134.99	2496.00	101.25
10.	ಮಂಡ್ಯ	7725	85.71	0	0.00
11.	ಕೊಡಗು	3516	37.13	1004.82	11.96
12.	ಹಾಸನ	8269	138.34	4731.61	192.85
13.	ಚಿಕ್ಕಮಗಳೂರು	5991	108.58	3108.00	148.07
14.	ದಕ್ಷಿಣ ಕನ್ನಡ	3403	34.20	221.47	2.19
15.	ಉಡುಪಿ	5007	50.32	1767.04	17.67
16.	ಧಾರವಾಡ	9148	220.94	7924.18	222.12
17.	ಗದಗ್	6494	179.27	2647.75	95.71

ಕ್ರ.ಸಂ.	ಜಿಲ್ಲೆ	ಗುರಿ		ವಿತರಣೆಯ ಪ್ರಗತಿ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
18.	ಹಾವೇರಿ	14438	433.61	31506.00	561.15
19.	ಉತ್ತರ ಕನ್ನಡ	8505	114.62	5654.88	145.66
20.	ಬೆಳಗಾಂ	28054	708.75	33158.57	729.44
21.	ಬಿಜಾಪುರ	5218	368.25	5812.80	422.37
22.	ಬಾಗಲಕೋಟೆ	6055	265.24	4385.51	216.24
23.	ರಾಯಚೂರು	12396	352.82	11631.41	433.49
24.	ಕೊಪ್ಪಳ	7554	212.80	7380.35	288.82
25.	ಬಳ್ಳಾರಿ	12550	440.67	14637.50	392.66
26.	ಗುಲ್ಬರ್ಗಾ	14748	661.14	10052.50	474.34
27.	ಬೀದರ್	7230	213.95	17895.00	407.99
	ಒಟ್ಟು	**252700**	**6465.60**	**239380.47**	**6818.91**

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೀಜವನ್ನು ಸಮರ್ಪಕವಾಗಿ ಹಂಚಿಲ್ಲ, ಬೀಜದ ಕೊರತೆಯಾಗಿದೆ. 20 ಪರ್ಸೆಂಟ್ ಮಾತ್ರ ರೈತರಿಗೆ ಬೀಜಗಳು ಸಿಕ್ಕಿದೆ. 80 ಪರ್ಸೆಂಟ್ ರೈತರಿಗೆ ಬೀಜಗಳು ಸಿಕ್ಕಿಲ್ಲ. ಸಬ್ಸಿಡಿಯಿಂದ ವಂಚಿತರಾಗಿದ್ದಾರೆ. ಮೊನ್ನೆ ಪ್ರಜಾವಾಣಿ ಪತ್ರಿಕೆಯಲ್ಲಿ ಕೂಡ ಡೀಟೈಲ್ ಆಗಿ ಇದರ ಬಗ್ಗೆ ಬಂದಿದೆ. ಬಹಳ ಜನ ರೈತರಿಗೆ ಈ ಕಂಪನಿಗಳಿಂದ ಬಂದಿರುವಂತಹ ಎಲ್ಲಾ ಬೀಜಗಳು ಹೊಲಸು ಬೀಜಗಳು ಹಾಗೂ ಗೊಬ್ಬರ ಕೂಡ ಅದೇ ರೀತಿಯಿದ್ದು ಎರಡೂ ಸರಿಯಿಲ್ಲ. ಬಹಳ ಜನ ರೈತರಿಗೆ ಬೀಜದಿಂದ ಮೋಸವಾಗಿದೆ. ಮೊನ್ನೆ ಜೀವಿಜಯ ನಿಮಗೆ ತಂದು ತೋರಿಸಿದರು. ಯಾವ್ಯಾವ ಕಂಪನಿಗಳು ಗೊಬ್ಬರವನ್ನು ಮಾರುತ್ತಿವೆ, ಅವುಗಳಿಂದ ಅನಾಹುತಗಳು ಆಗುತ್ತಿವೆ. ಸಬ್‌ಸ್ಟ್ಯಾಂಡರ್ಡ್ಸ್ ಗೊಬ್ಬರವನ್ನು ಮಾರುತ್ತಿದ್ದಾರೆ. ರೈತರು ಇದರಿಂದ ಕಂಗಾಲಾಗುತ್ತಿದ್ದಾರೆ. ಆ ಪರಿಸ್ಥಿತಿ ಇವತ್ತು ಉದ್ಭವಿಸುತ್ತಿದೆ. ಅದರ ಬಗ್ಗೆ ಮೊನ್ನೆ ಕೂಡ ಕೌನ್ಸಿಲ್‌ನಲ್ಲಿ ಹೇಳಿದ್ದಾರೆ. ಬಿತ್ತನೆ ಬೀಜದ ಬಗ್ಗೆ ಪ್ರಜಾವಾಣಿಯಲ್ಲಿ ಒಂದು ಆರ್ಟಿಕಲ್ ಬಂದಿದೆ. "ಬೀಜ ವಿತರಣೆ" ರೈತರಿಗೆ ಅಧಿಕಾರಿಗಳಿಂದಲೇ ವಂಚನೆ" ಇದು ಕನ್ನಡ ಪ್ರಭದಲ್ಲಿ ಬಂದಿದೆ. ಅಧಿಕಾರಿಗಳಿಂದ ವಂಚನೆ ಹೇಗಾಗುತ್ತದೆ ಎಂದರೆ, ರಸೀದಿಯನ್ನು ಕೊಡುತ್ತಾರೆ. ಆ ರಸೀದಿಯನ್ನು ಗ್ರಾಮ ಸೇವಕನಿಂದ ತೆಗೆದುಕೊಂಡು ಬರುತ್ತಾರೆ. ಲೈನ್‌ಗೆ ನಿಂತಾಗ ಆ ರಸೀತಿಯಲ್ಲಿ ನಾಲ್ಕು ಕ್ವಿಂಟಾಲ್ ಇದ್ದರೆ ಎರಡು ಕ್ವಿಂಟಾಲ್ ಬರೆಯುತ್ತಾರೆ. ಅದನ್ನು ಇವರೇ ತಿದ್ದುತ್ತಾರೆ. ಆ ರೀತಿ ತಿದ್ದಿರುವುದು ಇಲ್ಲಿ ಇದೆ. ಅದನ್ನು ಇದರಲ್ಲಿ ಹಾಕಿದ್ದಾರೆ, ತೋರಿಸುತ್ತೇನೆ. ಇದನ್ನು ಕಳುಹಿಸಿಕೊಡುತ್ತೇನೆ. ಈ ರೀತಿಯ ಪರಿಸ್ಥಿತಿ ಉಂಟಾದರೆ ರೈತರ ಗತಿ

ಏನಾಗಬೇಕು? ರೈತರಿಗೆ ತೊಂದರೆಯೇನಾಗಿದೆ ಎಂದರೆ ಯಾರ್ಯಾರಿಗೆ ಬೀಜಗಳು ಸಿಗಬೇಕು, ಅದು ಸಿಗುತ್ತಿಲ್ಲ. ಆದರೆ ಅವರು ಸಮರ್ಪಕವಾಗಿ ಸಿಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಅಷ್ಟೊಂದು ಸಮರ್ಪಕವಾಗಿ ಸಿಕ್ಕಿಲ್ಲ. ನೀವು 75 ಪರ್ಸೆಂಟ್ ಸಬ್ಸಿಡಿ ಮಾಡಿದ್ದೇವೆಂದು ಹೇಳುತ್ತೀರಿ. ಅದರಿಂದ ಯಾರಿಗೆ ಲಾಭವಾಗುತ್ತಿದೆ? ಆ 75 ಪರ್ಸೆಂಟ್ ಸಬ್ಸಿಡಿಯಿಂದ ಕಂಪನಿಗಳಿಗೆ ಲಾಭವಾಗುತ್ತದೆ, ಹೊರತು ರೈತರಿಗೆ ಆಗುತ್ತಿಲ್ಲ. ಅವರು ಮಾರಿಕೊಂಡು ಅವರು ತಿಂದು ಹೋಗುತ್ತಿದ್ದಾರೆ ವಿನಃ ಅದರಿಂದ ರೈತರಿಗೆ ಏನೂ ಲಾಭವಾಗುತ್ತಿಲ್ಲ. ತಾವು 75 ಪರ್ಸೆಂಟ್ ಕೊಟ್ಟಿರುವುದು ಸಂತೋಷ ಆದರೆ ಎಲ್ಲಾ ರೈತರಿಗೆ ಸಿಗುತ್ತಿಲ್ಲ. 20 ಪರ್ಸೆಂಟ್ ರೈತರಿಗೆ ಮಾತ್ರ ಸಿಕ್ಕಿದೆ. ಇನ್ನು 80 ಪರ್‌ಸೆಂಟ್ ರೈತರು ಸಬ್ಸಿಡಿಯಿಂದ ವಂಚಿತರಾಗಿದ್ದಾರೆ.

ಅಧ್ಯಕ್ಷರು : ಚೈನಾದಲ್ಲಿ ಕ್ಯಾಷ್ ಸಬ್ಸಿಡಿ ಕೊಡುತ್ತಾರೆ. ಇಲ್ಲಿ ಬೀಜದ ಮೇಲೆ, ಗೊಬ್ಬರದ ಮೇಲೆ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿ ಮಧ್ಯವರ್ತಿಗಳು ತಿಂದುಕೊಂಡು ಹೋಗುತ್ತಾರೆ. ಆದರೆ ಅಲ್ಲಿ ಕ್ಯಾಷ್ ಸಬ್ಸಿಡಿ ಕೊಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೌದು. ಕ್ಯಾಷ್ ಸಬ್ಸಿಡಿ ಕೊಟ್ಟರೆ ಅವರ ಕೈಗಾದರೂ ಮುಟ್ಟುತ್ತದೆ. ಇದನ್ನು ಕಂಪನಿಗಳು ತಿಂದು ಹೋಗುತ್ತಿವೆ. ಪಾಪ ರೈತರು ವಂಚಿತರಾಗುತ್ತಿದ್ದಾರೆ. ಏನು ಉಪಯೋಗ? ನೀವು ಸಬ್ಸಿಡಿ ಎಷ್ಟು ಮಾಡಿದರೂ ಕೂಡ ಯಾರಿಗೆ ಲಾಭ? ಲಾಭವಾಗಿದ್ದು ಕಂಪನಿಗಳಿಗೆ. ರೈತರು ಗತಿಯಿಲ್ಲದೆ ಹಾಗೆ ಇದ್ದಾರೆ. ಮೊದಲು ರೈತರಿಗೆ ಬೀಜವನ್ನೆಲ್ಲಾ ಹೊಲದಲ್ಲಿ ರೆಡಿ ಮಾಡಿಕೊಡಳ್ಳುತ್ತಿದ್ದರು. ಅದನ್ನು ಮನೆಗೆ ಇಟ್ಟುಕೊಂಡು ಸಿದ್ದವಾಗಿರುತ್ತಿದ್ದರು. ಆದರೆ ಬೀಜದ ಕಂಪನಿಗಳು ಬಂದಿವೆ, ಸರ್ಕಾರ ಮಾಲು ಕೊಡುತ್ತದೆ ಎಂದು ಬೀಜವನ್ನು ರೆಡಿ ಇಟ್ಟುಕೊಳ್ಳುವುದನ್ನು ಬಂದ್ ಮಾಡಿದ್ದಾರೆ. ಈಗ ಯಾರ ಮನೆಗಳಲ್ಲೂ ಬೀಜಗಳಿಲ್ಲ. ಆದರೆ ಇಲ್ಲಿ ಬೀಜ ಖರೀದಿ ಮಾಡುವುದಕ್ಕೆ ಹೋದಾಗ ಸಂಪೂರ್ಣವಾಗಿ ಬೀಜ ಸಿಗುವುದಿಲ್ಲ. ಈ ಪರಿಸ್ಥಿತಿ ಉಂಟಾದರೆ ನಾಳೆ ರೈತರ ಗತಿಯೇನು? ಇದನ್ನು ಹೇಗೆ ಕಂಟ್ರೋಲ್ ಮಾಡುತ್ತೀರಿ? ನಾನು ಬ್ಲಾಕ್‌ಲಿಸ್ಟ್‌ನಲ್ಲಿ ಅವರನ್ನು ಹಾಕುತ್ತೀರಾ ಎಂದು ಕೇಳಿದರೆ ವಿಚಾರಣೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಆದರೆ ಬ್ಲಾಕ್‌ಲಿಸ್ಟ್‌ನಲ್ಲಿ ಹಾಕಿಲ್ಲ; ಯಾವಾಗ ವಿಚಾರಣೆ ನಡೆಯುತ್ತದೆ, ಎಷ್ಟು ಕಂಪನಿಗಳನ್ನು ಬ್ಲಾಕ್‌ಲಿಸ್ಟ್‌ನಲ್ಲಿ ಹಾಕಿದ್ದಿರಿ? ಇದರ ಬಗ್ಗೆ ಸಂಪೂರ್ಣವಾಗಿ ಹೇಳಿ ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಹಿರಿಯ ಶಾಸಕರಾದ ಗುರುಪಾದಪ್ಪ ನಾಗಮಾರಪಲ್ಲಿಯವರು 20 ಪರ್ಸೆಂಟ್ ಬೀಜ ಸಿಕ್ಕಿಲ್ಲ ಎಂದಿದ್ದು ಬಹಳ ತಪ್ಪು ಮಾಹಿತಿ. ಏಕೆಂದರೆ ಇವತ್ತು ವ್ಯಾಪಕವಾಗಿ ಇಡೀ ರಾಜ್ಯಾದ್ಯಂತ ಈ ಸರ್ಕಾರ 75 ಪರ್ಸೆಂಟ್ ಸಬ್ಸಿಡಿಯನ್ನು ಕೊಡುವುದರ ಮುಖಾಂತರ ರೈತ ಮತ್ತು ಅತೀ ಸಣ್ಣ ರೈತರಿಗೆ ಸಹಾಯ ಮಾಡುತ್ತಿದೆ. ಇವತ್ತು ಶಾಸಕರು ಮತ್ತು ಸಚಿವರು ಕೆಡಿಪಿ ಮೀಟಿಂಗ್ ಮಾಡಿದ್ದಾರೆ. ಅಲ್ಲಿನ ಅಧಿಕಾರಿಗಳ ಜೊತೆಯಲ್ಲಿ ವಿಚಾರಣೆ ಮಾಡಿದ್ದಾರೆ.

ಅಲ್ಲೆಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಹೋಗಿ ಬಹಳಷ್ಟು ಜನ ಕ್ಯೂ ನಿಂತಿದ್ದಾಗ ಸುಮಾರು ಜನ ಶಾಸಕರು, ಸಚಿವರು "ನೀವು ನೀಡುತ್ತಿರುವಂತಹ ಬೀಜ ಕರೆಕ್ಟಾಗಿ ಬಂದಿದೆ, ಇನ್ನೂ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು" ಎನ್ನುವ ಬೇಡಿಕೆ ಕೂಡ ಮಾಡಿದ್ದಾರೆ. ಆದರೆ ಮಾನ್ಯ ಸದಸ್ಯರು 20 ಪರ್ಸೆಂಟ್ ಬೀಜ ಸಿಕ್ಕಿಲ್ಲ ಎಂದು ಏನು ಹೇಳುತ್ತಾರೆ, ಅದು ಸರಿ ಅಲ್ಲ. ಬೀದರ್‌ಗೆ ಲಾಸ್ಟ್ ಟೈಂ ನಾನು ಸ್ವಂತ ಕೆಲಸದ ಮೇಲೆ ಹೋಗಿದ್ದೆ. ಔರಾದ್‌ನಲ್ಲಿ ನಾವು ಹೋದ ವರ್ಷ ಮತ್ತು ಈ ವರ್ಷ ನೋಡಿದರೆ ಬಹಳಷ್ಟು ಬೀಜವನ್ನು ಕೊಟ್ಟಿದ್ದೇವೆ. ಇವತ್ತು ತಾವು ಹೋದರೆ ನೇರವಾಗಿ ರೈತರ ಜೊತೆ ಸಂಪರ್ಕ ಮಾಡಿ, ಏನಾದರೂ ಲೋಪದೋಷಗಳು ಕಂಡುಬಂದರೆ ತಾವು ನೇರವಾಗಿ ಆ್ಯಕ್ಷನ್ ತೆಗೆದುಕೊಳ್ಳಬಹುದು. ಏಕೆಂದರೆ ನಾವು ರಾಜ್ಯಾದ್ಯಂತ ವ್ಯಾಪಕವಾಗಿ ಇವತ್ತು ಸ್ಕೀಮ್ ನಡೆಸುತ್ತಿದ್ದೇವೆ ಇವತ್ತು ಎಲ್ಲಾ ಕಡೆ ಶಾಸಕರು ಏನಿದ್ದಾರೆ. ಅವರೆಲ್ಲಾ ರೈತರ ಕುಟುಂಬದಿಂದ ಹಾಗೂ ಹಳ್ಳಿಯಿಂದ ಬಂದಿರುವವರು ತಿಂಗಳಿಗೆ ಒಂದು ಸಲ ಕೆಡಿಪಿ ಮೀಟಿಂಗ್ ಮಾಡುತ್ತಿದ್ದು, ಅಲ್ಲಿ ರೈತರು ಕಡಿಮೆ ಬೀಜ ಬರುತ್ತಿದ್ದು, ಇನ್ನು ಹೆಚ್ಚು ಪ್ರಮಾಣದಲ್ಲಿ ವಿತರಿಸಬೇಕೆಂದು ಬಹಳಷ್ಟು ಕಡೆಯಿಂದ ಬೇಡಿಕೆ ಬಂದಿದ್ದು, ಆ ವಿತರಣಾ ಕಾರ್ಯಕ್ರಮ ಅಚ್ಚುಕಟ್ಟಾಗಿ ಹತ್ತು ಹನ್ನೆರಡು ದಿವಸ ಮೊದಲೇ ಮುಂಗಾರು ಪ್ರಾರಂಭವಾದರೂ ವ್ಯಾಪಕವಾಗಿ ಬೀಜವನ್ನು ಕೊಡುವಂತಹ ವ್ಯವಸ್ಥೆಯನ್ನು ಇವತ್ತು ಸರ್ಕಾರ ಮಾಡಿದೆ. ಆದರೂ ತಾವು ಕಳಪೆ ಬೀಜದ ಬಗ್ಗೆ ಹೇಳಿದಿರಿ, ಬೀದರ್‌ನಲ್ಲಿ ನಾವು ನೀವು ಇದ್ದೇವೆ. ಅದರ ಬಗ್ಗೆ ಮಾತನಾಡುವುದಕ್ಕಿಂತ ನಮ್ಮ ಗಮನಕ್ಕೆ ಮೊದಲೆ ತಂದಿದ್ದರೆ, ತಕ್ಷಣ ಬೀದರ್‌ನಲ್ಲಿ ಆ್ಯಕ್ಷನ್ ತೆಗೆದುಕೊಳ್ಳಬಹುದಿತ್ತು. ಮೊನ್ನೆ ಎರಡು ಮೂರು ಕೇಸಸ್ ನಮ್ಮ ಹತ್ತಿರ ಬಂದಿವೆ. ಅದನ್ನು ದಾವಣಗೆರೆ ಟೆಸ್ಟ್ ಮಾಡಿಸುವುದಕ್ಕೆ ಕಳುಹಿಸಿದ್ದೇವೆ. ಅದು ರಿಪೋರ್ಟ್ ಬಂದ ತಕ್ಷಣ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ಇನ್ನು ತಮಗೆ ಹೇಳಬೇಕಾದರೆ ಉದ್ದು, ಹೆಸರು ಬಗ್ಗೆ ವಿರೋಧ ಪಕ್ಷದ ನಾಯಕರು ಕೇಳಿದ್ದರು. ಈಗ ಅಲ್ಲಿ ರಿಪೋರ್ಟ್ ಬಂದಿದೆ. ಹೋದ ವರ್ಷ ಗುಲ್ಬರ್ಗದಲ್ಲಿ 129 ಕ್ವಿಂಟಾಲ್ ಹೆಸರು ಕೊಟ್ಟಿದ್ದರು. ಈ ವರ್ಷ 1,320 ಕ್ವಿಂಟಾಲ್ ಕೊಟ್ಟಿದ್ದೇವೆ. ಉದ್ದು ಹೋದ ವರ್ಷ 270 ಕ್ವಿಂಟಾಲ್ ಇತ್ತು. ಈ ವರ್ಷ 650 ಕ್ವಿಂಟಾಲ್ ಕೊಟ್ಟಿದ್ದೇವೆ. ಬೀದರ್ ಹೆಸರು 248 ಕ್ವಿಂಟಾಲ್ ಕೊಟ್ಟಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಕೃಷಿ ಮಂತ್ರಿಗಳು ನಮ್ಮ ಭಾಗದಿಂದ ಬಂದಿರುವವರು. ಆದರೂ ಕೂಡ ವಿಷಯವನ್ನು ತಿಳಿದು ಮಾತನಾಡುತ್ತಿದ್ದಾರೆ. ಅದರ ಬಗ್ಗೆ ಅಭ್ಯಂತರವಿಲ್ಲ. ಈಗ ಹೊದ ವರ್ಷ ಮತ್ತು ಈ ವರ್ಷ ಕಂಪೇರ್ ಮಾಡುವುದಕ್ಕಾಗುವುದಿಲ್ಲ. ಹೋದ ವರ್ಷ ಉದ್ದು ಇಷ್ಟು ಕೊಟ್ಟಿತ್ತು. ಈಗ ಹೆಚ್ಚು ಕೊಟ್ಟೆವು ಎನ್ನುವುದಿಲ್ಲ. ಆದರೆ ಇವತ್ತು ರೈತರಿಗೆ ಎಷ್ಟು ಬೇಡಿಕೆ ಇದೆ. ಅದರ ಆಧಾರದ ಮೇಲೆ ಕೊಡಬೇಕು. ನಾನು ಹೀಗೆ ಸುಮ್ಮನೆ ಕೇಳಲಿಲ್ಲ. ನಾವು ಮಾನ್ಯ ಖರ್ಗೆಯವರು ಮಾತನಾಡಿದೆವು. ನಿಮ್ಮ ಜಾಯಿಂಟ್ ಡೈರೆಕ್ಟರ್ ಜೊತೆ ಮಾತನಾಡಿದ್ದೇವೆ. ಇನ್ನು 3,000 ಕ್ವಿಂಟಾಲ್ ಉದ್ದು ಬೇಕಾಗಿದೆ 4–5 ದಿವಸದಲ್ಲಿ ಬಿತ್ತನೆ

ಮುಗಿಯುತ್ತದೆ. ಅದರಿಂದ ಉದ್ದು ಎಲ್ಲಾ ಕಡೆ ವಿತರಣೆ ಆಗಿಲ್ಲವೆನ್ನುವಂತಹ ಮಾತನ್ನು ಹೇಳಿದರು. ಇವತ್ತು ಏನಾಗಿದೆ ಸಬ್ಸಿಡಿ ಕೊಡತಕ್ಕಂಥ ರೀತಿಯಲ್ಲಿ 75 ಪರ್ಸೆಂಟ್ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಆ ಸಬ್ಸಿಡಿ ಇದುವರೆಗೂ ಎಲ್ಲಾ ಕಡೆ ಹೋಗಿ ಮುಟ್ಟಿಲ್ಲ. ಹೋದ ವರ್ಷ ನಾವು 52 ಕೋಟಿ ರೂಪಾಯಿ ಬಿಡುಡೆ ಮಾಡಿದ್ದೇವೆ. ಈ ವರ್ಷ ತಾವು ಎಷ್ಟು ಮಾಡಿದ್ದೀರಿ ಎಂದು ಹೇಳಬೇಕು. ನಿಮಗೆ ರೈತರ ಬೇಡಿಕೆ ಆ ಭಾಗದ ಜಿಲ್ಲೆಗಳಲ್ಲಿ ಎಷ್ಟಿದೆ ಅದಕ್ಕೆ ಅನುಗುಣವಾಗಿ ವಿತರಣೆ ಮಾಡಿದರೆ ಸಾಕು.

ಶ್ರೀ ಕೆ. ಶ್ರೀನಿವಾಸಗೌಡ : ರೈತರಿಗೆ ಹೋದ ವರ್ಷ ಇಷ್ಟು ಸಪ್ಲೈ ಮಾಡಿದ್ದೆವು. ಈ ವರ್ಷ ಇಷ್ಟು ಮಾಡಿದ್ದೇವೆ ಎಂದು ಹೇಳುವುದಿಲ್ಲ. ಅವರಿಗೆ ಅಗತ್ಯ ಇರುವಂತಹ ಬಿತ್ತನೆ ಬೀಜ ಎಷ್ಟು ಬೇಕು ಅಷ್ಟು ಕೊಡಬೇಕು. ಅದು ಬಿಟ್ಟು ನೀವು ಹೋದ ವರ್ಷ ನೂರು ಕ್ವಿಂಟಾಲ್ ಕೊಟ್ಟಿದ್ದು, ಈ ವರ್ಷ ಸಾವಿರ ಕ್ವಿಂಟಾಲ್ ಕೊಟ್ಟೆವು ಎಂದು ಹೇಳುವುದಕ್ಕಾಗುವುದಿಲ್ಲ. ಅವರ ಅಗತ್ಯಕ್ಕೆ ಬಿತ್ತನೆ ಬೀಜವನ್ನು ಕೊಡುವಂತಹ ಕಾರ್ಯಕ್ರಮವನ್ನು ಹಾಕಿದ್ದೀರಾ? ಅದರ ಬಗ್ಗೆ ಹೇಳಿ.

(ಅಡಚಣೆ)

ಅಧ್ಯಕ್ಷರು : ಎಲ್ಲರೂ ಹೀಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಉತ್ತರ ಕೊಡುವುದು ವೆಂಕಟೇಶ್ ಅಲ್ಲ, ಉತ್ತರ ಕೊಡುವುದು.....

ಅಧ್ಯಕ್ಷರು : ಗೌಡರೆ, ಈಗ ನಿಮ್ಮ ಪ್ರಶ್ನೆ ಅಲ್ಲ.....

ಶ್ರೀ ಕೆ. ಶ್ರೀನಿವಾಸಗೌಡ : ಉತ್ತರ ಕೊಡುವುದು ಅವರಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಶ್ರೀನಿವಾಸಗೌಡರೇ..... ತಾವು ದಯಮಾಡಿ ಕುಳಿತುಕೊಳ್ಳಬೇಕು. ಯಾರು ಪ್ರಶ್ನೆ ಕೇಳಿದ್ದಾರೆ ಅವರೇ ಉಪ ಪ್ರಶ್ನೆ ಕೇಳಿ ಬೇರೆಯವರು ಕೇಳಬೇಡಿ. ಈ ತರಹ ಆದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಇದು ರಾಜ್ಯಕ್ಕೆ ಗಹನವಾದಂತಹ ವಿಷಯ ಸ್ವಾಮಿ.....

(ಅಡಚಣೆ)

ಅಧ್ಯಕ್ಷರು : ಹೌದು ಸ್ವಾಮಿ ನೀವು ಬೇಡಿಕೆ ಮೇಲೆ ಚರ್ಚೆ ಮಾಡಿ, ಇನ್ನೇನಾದರೂ ಮಾಡಿ. ಈಗಾಗಲೇ ಒಂದು ಗಂಟೆ ಆಯಿತು. ನಾಲ್ಕು ಪ್ರಶ್ನೆಗಳನ್ನು ಮಾತ್ರ ತೆಗೆದುಕೊಂಡಿದ್ದು. ಸಮಯ ನೋಡಿ ಎಷ್ಟಾಗಿದೆ ಎಂದು. ಎಲ್ಲಾ ಸಹಕರಿಸಬೇಕು, ಸುಮ್ಮನೆ ಎಲ್ಲಾ ಎದ್ದು ನಿಂತುಕೊಂಡು ಮಾತನಾಡುತ್ತೀರಿ.

(ಅಡಚಣೆ)

ಅಧ್ಯಕ್ಷರು : ಕುಳಿತುಕೊಳ್ಳಿ. ನಿಮಗೆ ಸಂಬಂಧಪಡದೇ ಇರುವಂತಹ ವಿಷಯಕ್ಕೆ ಏಕೆ ಮಾತನಾಡುವುದು? ಕುಳಿತುಕೊಳ್ಳಿ. ಏಕೆ ಈ ತರಹ ಮಾಡುತ್ತೀರಿ ನೀವು. ಈ ಸದನದ ಸಮಯವನ್ನು ಹಾಳು ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ. ಸುಮ್ಮನೆ ಕುಳಿತುಕೊಳ್ಳಿ. ಉತ್ತರ ಹೇಳಿ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ನೀಡಲಿ. ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರ ಉತ್ತರ ನೀಡಬೇಕು.

ಅಧ್ಯಕ್ಷರು : ಎಲ್ಲರೂ ನಿಂತುಕೊಂಡು ನನ್ನದೊಂದು ಪ್ರಶ್ನೆ ಎಂದು 224 ಜನ ಕೇಳಿದರೆ ನಾವು ಪ್ರಶ್ನೋತ್ತರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ರಿಪೀಟೆಡ್ ಆಗಿ ಹೇಳುತ್ತಿರುತ್ತೇನೆ. ಯಾರೂ ಸುಮ್ಮನೆ ಇರುವುದಿಲ್ಲ. ಎದ್ದು ನಿಂತುಕೊಂಡು ಕೇಳುತ್ತಿರುತ್ತೀರಿ.

ಶ್ರೀ ಬಂಡೆಪ್ಪ ಕಾಶಂಪೂರ : ಸನ್ಮಾನ್ಯ ಅಧ್ಯಕ್ಷರೇ, ಹಿರಿಯರಾದಂತಹ ವಿರೋಧ ಪಕ್ಷದ ನಾಯಕರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಿಜಕ್ಕೂ ಇವತ್ತು ಬೇಡಿಕೆ ಎಷ್ಟಿದೆ ಅಷ್ಟು ಸಪ್ಲೈ ಮಾಡಬೇಕಾಗುತ್ತದೆ. ಅದೇ ನಿಟ್ಟಿನಲ್ಲಿ ಇವತ್ತು ಆಂಧ್ರದಿಂದ ಕೂಡ ತರಿಸಿ ಕೊಟ್ಟಿದ್ದೇವೆ. ಇನ್ನು ತೊಗರಿ ಸೀಜನ್ ಗುಲ್ಬರ್ಗದಲ್ಲಿ ಪ್ರಾರಂಭವಾಗುತ್ತಿದೆ. ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಏನೂ ತೊಂದರೆ ಬರದ ಹಾಗೆ ಅಲ್ಲಿ ನೋಡುತ್ತೇವೆಂದು ಹೇಳುತ್ತೇನೆ. ಮಾನ್ಯ ವೆಂಕಟೇಶ್‌ರವರು ಏಕೆ ಮಾತನಾಡುತ್ತಿದ್ದಾರೆ ಎಂದರೆ ಪ್ರಶ್ನೆಯಲ್ಲಿ ಹೆಚ್.ಡಿ. ಎಂದು ಬಂದಿದೆ. ಈ ವರ್ಷ ನಾನೇ ಸ್ವತಃ ಅಲ್ಲಿಗೆ ಹೋಗಿ ನೋಡಿದೆ. ಟಿ.ವಿ.ಯಲ್ಲಿ ಏನು ಪ್ರಚಾರವಾಯಿತು, ಬೆಳಿಗ್ಗೆ ನಾನೇ ಸ್ವತಃ ಅಲ್ಲಿಗೆ ಹೋಗಿ, ಸಮಗ್ರವಾಗಿ ಅಲ್ಲಿನ ಮೂರು ರೈತ ಸಂಪರ್ಕ ಕೇಂದ್ರವನ್ನು ಭೇಟಿ ಮಾಡಿದೆ. ಅಲ್ಲಿ ಬೇಕಾಗಿದ್ದಂಥ DCS 32 ಅನ್ನು ವ್ಯಾಪಕವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಟ್ಟಿ ಬಂದಿದ್ದೇವೆ. ಇವತ್ತು ತಾವು ಎಲ್ಲರೂ ಹೋಗಿ ನೋಡಬಹುದು. ಅಲ್ಲಿ ಹೆಚ್.ಡಿ. ಕೋಟೆಯಲ್ಲಿ ಒಳ್ಳೆಯ ಮಳೆಯಾಗಿದೆ, ಒಳ್ಳೆಯ ಬೆಳೆಯು ಆಗಿದೆ. ಇಲ್ಲಿಗೆ ತಾವೆಲ್ಲರೂ ಹೋಗಿ ನೋಡಬಹುದು. ಆ ಒಂದು ಪ್ರಶ್ನೆ ಬಂದಿರುವುದರಿಂದ ಮಾನ್ಯ ವೆಂಕಟೇಶ್‌ರವರು, ಹೇಳುತ್ತಿದ್ದಾರೆ. ಇದರಲ್ಲಿ ಬೇರೆ ಮಾತು ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನು ಕೇಳಿರುವಂಥಾದ್ದಕ್ಕೆ, ಮಾನ್ಯ ಮಂತ್ರಿಯವರು ಏನು ಹೇಳಿದರೆಂದರೆ ಶೇ. 80ರಷ್ಟು ಸಿಗುತ್ತದೆ. ನಾನು ಹೇಳಿದ್ದು ಸತ್ಯಕ್ಕೆ ದೂರವೆಂದು ಹೇಳಿದರು. ಇಲ್ಲಿ ಪೇಪರ್‌ನಲ್ಲಿ ಇಪ್ಪತ್ತು ಲಕ್ಷ ಜನ ರೈತರಿಗೆ, ಸಬ್ಸಿಡಿ ಖಾಸಗಿಯವರ ಪಾಲು ಎಂದು ಬಂದಿದೆ. ತಾವು ಪ್ರಜಾವಾಣಿ ದಿನಾಂಕ: 28–6–06ರ ಪತ್ರಿಕೆಯನ್ನು ಓದಿ. ಇದರಲ್ಲಿ ಕರೆಕ್ಟ್ ಆಗಿ ಬಂದಿದೆ. ಅದನ್ನು ತಾವು ನೋಡಿಲ್ಲವೆಂದು ಕಾಣುತ್ತದೆ. ಅದೇ ರೀತಿಯಲ್ಲಿ ಕನ್ನಡ ಪ್ರಭ ಪತ್ರಿಕೆಯಲ್ಲೂ ತಾವು ಡಿಟೈಲ್ ಅನ್ನು ನೋಡಿಲ್ಲ. ಇದರಲ್ಲೂ ಕೂಡ ರೈತರಿಗೆ ಅಧಿಕಾರಿಗಳಿಂದಲೇ ವಂಚನೆ ಎಂದು ಬಂದಿದೆ. ಇಲ್ಲಿ ರಸೀದಿಗಳನ್ನು ತಿದ್ದುವಂಥಾದ್ದರ ಬಗ್ಗೆ ತಾವು ಏನು ಹೇಳಿಲ್ಲ. ಅಲ್ಲಿ ಕಂಪೆನಿಯಲ್ಲಿ ಲೈನ್‌ಗೆ ನಿಂತಿರುತ್ತಾರಲ್ಲಾ, ಅವರಿಗೆ ನಾಲ್ಕು

ಕ್ವಿಂಟಾಲ್ ಇದ್ದರೆ ಎರಡು ಕ್ವಿಂಟಾಲ್ ಎಂದು ಮಾಡಿದ್ದಾರೆ. ನಾನು ಈ ರಸೀದಿಯನ್ನು ತಮಗೆ ಕಳುಹಿಸುತ್ತೇನೆ. ಈ ರಸೀದಿಗಳನ್ನು ತಿದ್ದಿದ್ದಾರೆ. ಈ ರೀತಿಯಾಗಿ ಮಾಡಿದರೆ, ರೈತರ ಗತಿ ಏನು ಆಗಬೇಕು? ನಾನು ಪೂರ್ತಿ ಹೇಳಿದ ಮೇಲೆ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳಲಿ. ಅದಕ್ಕೆ ಇದರ ಬಗ್ಗೆ ಗಮನ ಹರಿಸಬೇಕು. ಇದನ್ನು ಯಾರ್ಯಾರು ಮಾಡಿದ್ದಾರೋ, ಅಂತಹ ಕಂಪೆನಿಗಳನ್ನು ಬ್ಲಾಕ್ ಲಿಸ್ಟ್‌ನಲ್ಲಿ ಹಾಕುತ್ತೀರೋ ಹೇಗೆ? ಇದರ ಬಗ್ಗೆ ತಾವು ಸದನದಲ್ಲಿ ಉತ್ತರವನ್ನು ಕೊಡಬೇಕು. ಇನ್ನೊಂದು ವಿಚಾರವೇನೆಂದರೆ ಎಲ್ಲರಿಗೂ ಬಿತ್ತನೆ ಬೀಜ ಸಿಗುತ್ತಿಲ್ಲ ಇದು ನಿಜ. ನಮ್ಮಲ್ಲೂ ಕೆಲವು ಮಂದಿಗೆ ಸಿಕ್ಕಿಲ್ಲ. ಇನ್ನು ಬೇರೆ ಜಿಲ್ಲೆಗಳದ್ದು ತಾವು ನೋಡಿ, ಬೇರೆ ಜಿಲ್ಲೆಗಳಲ್ಲೂ ಬಹಳ ತೊಂದರೆಯಾಗಿದೆ. ಇದು ಯಾರ್ಯಾರಿಗೆ ಸಿಕ್ಕಿಲ್ಲ. ಅದು ಎಲ್ಲರಿಗೂ ಸಿಗಬೇಕು. ಇಲ್ಲಿ ಇಷ್ಟೇ ಸಿಗಬೇಕು. ಅಷ್ಟೇ ಸಿಗಬೇಕೆಂದು ಅಲ್ಲ. ಈಗ ನಮ್ಮ ವಿರೋಧಪಕ್ಷದ ನಾಯಕರು ಹೇಳಿದರು. ಎಲ್ಲರಿಗೂ ಬೀಜ ಕೊಡಬೇಕು. ಒಂದು ವರ್ಷ ಹೆಚ್ಚಿಗೆ ಆಗಬಹುದು, ಒಂದು ವರ್ಷ ಕಡಿಮೆಯೂ ಆಗಬಹುದು. ಇದೇ ವರ್ಷ ಇಷ್ಟೇ ಇತ್ತು. ಇಷ್ಟನ್ನೇ ಕೊಡುತ್ತೇವೆಂದು ಅಲ್ಲ. ಅದನ್ನು ಕೂಡ ತಾವು ನೋಡಬೇಕು. ಇನ್ನು ಮತ್ತೊಂದು ವಿಚಾರವನ್ನು ನಾನು ಹೇಳಬಯಸುವುದು. ಈ ಸಬ್ಸಿಡಿ ರೈತರಿಗೆ ಹೋಗಬೇಕು. ನೀವು ಅವರಿಗೆ ಹಣವನ್ನೇ ಕೊಟ್ಟು ಬಿಡಿ. ಅವರು ಎಲ್ಲಿ ಬೇಕಾದರೂ ಖರೀದಿಯನ್ನು ಮಾಡಿಕೊಳ್ಳಲಿ. ಖಾಸಗಿಯಲ್ಲಿ ಕಂಪೆನಿಗಿಂತ ಕಡಿಮೆ ಬೆಲೆ ಇದೆ. ನಿಮಗೆ ಕಂಪೆನಿಯವರು ಮೋಸ ಮಾಡಿದ್ದಾರೆ. ಅವರು ಟೆಂಡರ್ ಅನ್ನು ಜಾಸ್ತಿ ಬೆಲೆಗೆ ಹಾಕಿದ್ದಾರೆ. ಈಗ ಅದೇ ಬೀಜ ಹೊರಗಡೆ ಹೋದರೆ ಕಡಿಮೆ ಬೆಲೆಗೆ ಸಿಗುತ್ತದೆ. ಆ ಕಂಪೆನಿಯವರದ್ದು ಬೆಲೆ ಜಾಸ್ತಿ ಇದೆ. ಅದಕ್ಕೆ ಇದರಲ್ಲಿ ಮೋಸ ಮಾಡಿದ್ದಾರೆಂದು ಹೇಳುತ್ತೇನೆ. ನೀವು ರೈತರಿಗೆ ಕ್ಯಾಶ್ ಕೊಡಿ, ಅವರು ಸಂತೋಷವಾಗಿ ಎಲ್ಲಿಂಯಾದರೂ ತೆಗೆದುಕೊಳ್ಳಲಿ. ಇಲ್ಲಿ ಯಾರಿಗೆ ಅನುಕೂಲವಾಗುತ್ತಿದೆಯೆಂದರೆ, ಕಂಪೆನಿಗಳಿಗೆ ಅನುಕೂಲವಾಗುತ್ತಿದೆ. ಅದೇ ಪ್ರಕಾರ ಗೊಬ್ಬರವೂ ಆಗುತ್ತದೆ. ಆ ರೀತಿಯಾಗಿ ಆಗಬಾರದು. ತಾವು ಸಮರ್ಥರಿದ್ದೀರಿ. ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕು. ತಾವು ಈ ಬಗ್ಗೆ ಸದನಕ್ಕೆ ಹೇಳಬೇಕು. ನಾವು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಕಂಪೆನಿಗಳನ್ನು ಬ್ಲಾಕ್ ಲಿಸ್ಟ್‌ನಲ್ಲಿ ಹಾಕುತ್ತೇವೆಂಬುದನ್ನು ಸದನಕ್ಕೆ ಉತ್ತರವನ್ನು ಕೊಡಿ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ವ್ಯಾಪಕವಾಗಿ ಈ ವರ್ಷ ಇಡೀ ರಾಜ್ಯದಲ್ಲಿ ವ್ಯಾಪಕವಾಗಿ 22 ಲಕ್ಷ ಹೆಕ್ಟಾರ್ ಅನ್ನು ಟಾರ್ಗೆಟ್ ಮಾಡಿಕೊಂಡಿದ್ದೇವೆ. ಅದರಲ್ಲಿ ಶೇ. 75ರಷ್ಟು ತೆಗೆದುಕೊಂಡರೆ 16 ಲಕ್ಷ ಹೆಕ್ಟಾರ್‌ಗೆ ನಾವು ಕೊಡಬೇಕೆಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈಗ ಮಾಜಿ ಕೃಷಿ ಸಚಿವರು ಇಲ್ಲೇ ಇದ್ದಾರೆ. ಅದರಲ್ಲಿ ಮೊನ್ನೆ 24ನೇ ತಾರೀಖಿನವರೆಗೆ ವರದಿ ಇದೆ. ಅದರಲ್ಲಿ ಸುಮಾರು 13 ಲಕ್ಷ ಜನ ರೈತರಿಗೆ ನಾವು ಸಬ್ಸಿಡಿಯನ್ನು ವಿತರಣೆ ಮಾಡಿದ್ದೇವೆ. ಆ ಕೆಲಸ ಇನ್ನು ನಡೆಯುತ್ತಲೇ ಇದೆ. ಇನ್ನು ಭತ್ತ, ರಾಗಿಯನ್ನು

ತೆಗೆದುಕೊಂಡು ಹೋಗುತ್ತಿದ್ದಾರೆ. ಈಗ ತಾವು ಇಷ್ಟೇ ಎಂದು ಏನು ಹೇಳಿದ್ದೀರಲ್ಲಾ, ಆ ರೀತಿ ಏನೂ ಇಲ್ಲ. ಇನ್ನು 13 ಲಕ್ಷ ರೈತರಿಗೆ ನಾವು ಮೊನ್ನೆ 24ನೇ ತಾರೀಖಿನವರೆಗೂ ಕೊಟ್ಟಿದ್ದೇವೆ. ಆವತ್ತಿನ ಡೇಟ್‌ವರೆಗೂ 68 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕ್ರಾಸ್ ಮಾಡಿದ್ದೇವೆ. ಬಜೆಟ್‌ನಲ್ಲಿ 42 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನು ಬಹಳಷ್ಟು ಕಡೆಗಳಲ್ಲಿ ಈ ಸ್ಕೀಮ್ ನಡೆಯುತ್ತಿದೆ. ಈ ಸಣ್ಣ ಅತೀ ಸಣ್ಣ ರೈತರಿಗೆ, ಈ ಸ್ಕೀಮ್ ಇರುವಂಥಾದ್ದು. ಇದನ್ನು ಹಿಂದಿನಿಂದ ಮಾಡುತ್ತಾ ಬಂದಿರುವಂಥಾದ್ದು, ನಾವು ಈಗ ಮೂರು ತಿಂಗಳಲ್ಲಿ ಏನು ಬದಲಾವಣೆಯನ್ನು ಮಾಡಿಲ್ಲ. ಈ ಪ್ರಕಾರವೇ ಶೇ. 50ರಷ್ಟು ಸಬ್ಸಿಡಿ ಇದ್ದಂಥಾದ್ದು. ಶೇ. 75ರಂತೆ ನಾವು ತೆಗೆದುಕೊಂಡು ಹೋಗುತ್ತಾ ಇದ್ದೇವೆ. ತಾವು ಕಳಪೆ ಎಂಬ ವಿಚಾರವಾಗಿ ಪ್ರಸ್ತಾಪ ಮಾಡಿದ್ದೀರಿ. ಈ ಪ್ರಕಾರವಾಗಿ ನಮ್ಮ ಕಡೆಯ ಭಾಗಗಳಿಂದ ಯಾವುದೇ ದೂರುಗಳು ಬಂದಿಲ್ಲ. ನಾನು ನಾಳೆ ಬೆಳಿಗ್ಗೆಯೇ ಬೀದರ್ ಜಿಲ್ಲೆಗೆ ಹೋಗುತ್ತಾ ಇದ್ದೇನೆ. ಅಲ್ಲಿ ತಮ್ಮ ಜನರಿಗೆ ಹೇಳಿ. ನಾನು ನಾಳೆ, ನಾಡಿದ್ದರಲ್ಲಿ ಅಲ್ಲಿ ಇರುತ್ತೇನೆ. ಅವರು ಯಾರೇ ಇದ್ದರೂ, ನನ್ನ ಬಳಿ ತಂದು ಕೊಟ್ಟರೆ ನಾನು ಇಮಿಡಿಯಟ್ ಆಗಿ ಟೆಸ್ಟ್ ಮಾಡಿಸಿ, ಆ್ಯಕ್ಷನ್ ಅನ್ನು ತೆಗೆದುಕೊಳ್ಳುತ್ತೇನೆ. ಇನ್ನು ತಾವು ರೇಟ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ರೇಟ್ ಟೆಂಡರ್‌ನಲ್ಲಿ ನಾವು ಮಾರುವಂಥ ಆರ್.ಎಸ್.ಕೆ. ಯಲ್ಲಿ ಮತ್ತು ರೈತರ ಸಂಪರ್ಕ ಕೇಂದ್ರವನ್ನು ಬಿಟ್ಟು, ಮಾರಾಟ ಮಾಡುವಂಥ ಅಂಗಡಿಯಲ್ಲಿ ವ್ಯತ್ಯಾಸವಿದ್ದರೆ, ಇಮ್ಮಿಡಿಯಟ್ ಆಗಿ, ಸೇಮ್ ಡೇ ಆ ಮನುಷ್ಯ ಇಡೀ ವರ್ಷ ಮಾರಾಟ ಮಾಡುವಂಥ ಕೆಲಸವನ್ನು ಮಾಡದ ಹಾಗೆ ಅವನನ್ನು ಬ್ಲಾಕ್ ಲಿಸ್ಟ್ ಅನ್ನು ಮಾಡುತ್ತೇವೆಂದು ಹೇಳಿದ್ದೇವೆ. ಇವತ್ತು ಬೀದರ್ ಜಿಲ್ಲೆಯಾಗಲಿ, ಮತ್ತೊಂದು ಕಡೆಯಿಂದ ಆಗಲಿ, ನನಗೆ ಯಾವುದೇ ರೀತಿಯ ಕಂಪ್ಲೇಂಟ್‌ಗಳು ಬಂದಿಲ್ಲ. ನಾನು ನಾಳೆಯೇ ಬೀದರ್ ಜಿಲ್ಲೆಗೆ ಹೋಗುತ್ತಾ ಇದ್ದೇನೆ. ತಾವು ತಮ್ಮ ಜನರಿಗೆ ಹೇಳಿ. ಅಲ್ಲಿ ಯಾವುದೇ ಮಾರುಕಟ್ಟೆಯಲ್ಲಿ ಇದಕ್ಕಿಂತ ಕಡಿಮೆ ಇದ್ದರೆ ನನ್ನ ಗಮನಕ್ಕೆ ತರಲು ಹೇಳಿ, ನಾನು ನಾಳೆ ಸಾಯಂಕಾಲವೇ ನಾನು ಆ ಬಗ್ಗೆ ಆ್ಯಕ್ಷನ್ ತೆಗೆದುಕೊಂಡು ತಮಗೆ ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಈ ರಸೀದಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಆ ಅಧಿಕಾರಿಗಳು ರಸೀದಿಯನ್ನು ತಿದ್ದುತ್ತಾರೆ.

ಅಧ್ಯಕ್ಷರು : ಈ ರಸೀದಿ ಇದ್ದರೆ ಏನು ಪ್ರಯೋಜನ? ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೆ, ತಾವು ಹಿರಿಯ ಸದಸ್ಯರು, ಮತ್ತೆ ಮಂತ್ರಿಗಳಾಗಿ ಇದ್ದವರು. ಒಂದೇ ಪ್ರಶ್ನೆಯನ್ನು ತಾಸು ಗಟ್ಟಲೆ ಮಾಡುವುದಕ್ಕೆ ಆಗುವುದಿಲ್ಲ. ತಾವು ಬೇಕಾದರೆ ಈ ಪ್ರಶ್ನೆಯನ್ನು ಅರ್ಧ ಗಂಟೆಯ ಕಾಲಾವಧಿಗೆ ಬೇಕಾದರೆ ಕನ್‌ವರ್ಟ್ ಮಾಡುತ್ತೇನೆ. ಇನ್ನು ಬಹಳ ಪ್ರಶ್ನೆಗಳು ಇವೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಇದು ಅರ್ಧ ಗಂಟೆ ಚರ್ಚೆಗೆ ಬರುವುದಿಲ್ಲ. ಈಗ ಮಾನ್ಯ ಸದಸ್ಯರು ಆ ರಸೀದಿಯ ಡಿಟ್ಯೆಲ್ಸ್ ಅನ್ನು ನನಗೆ ಕೊಟ್ಟರೆ, ಇವತ್ತೇ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ, ಅದರ ಬಗ್ಗೆ ನಾನು ಸಮಗ್ರವಾಗಿ ಪರಿಶೀಲನೆಯನ್ನು ಮಾಡಿಸುತ್ತೇನೆಂದು ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆಯಿತು, ತಮಗೆ ಈ ಮಾಹಿತಿಗಳನ್ನು ಕಳುಹಿಸಿಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಮಾಹಿತಿಗಳ ಪ್ರತಿಯನ್ನು ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಟ್ಟರು)

ಕೋಲಾರ ಜಿಲ್ಲೆಯಲ್ಲಿ ತುಂತುರು ಮತ್ತು ಹನಿ ನೀರಾವರಿಗೆ ಸಹಾಯಧನ

184 (1001) ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ತುಂತುರು ಮತ್ತು ಹನಿ ನೀರಾವರಿಗೆ ಸಹಾಯಧನ ನೀಡುತ್ತಿರುವುದು ನಿಜವೇ;

ಆ) ಇದು ಯಾವ ವರ್ಷದಿಂದ ಜಾರಿಗೆ ಬಂದಿದೆ;

ಇ) ಹಾಗಾದರೆ ಅದರ ಪ್ರಮಾಣ ಎಷ್ಟು; ಇದರ ಪ್ರಯೋಜನ ಪಡೆಯುತ್ತಿರುವ ರೈತರೆಷ್ಟು;

ಈ) ಎಷ್ಟು ಜನ ರೈತರಿಗೆ ಇನ್ನೂ ಸಹಾಯಧನ ಬಿಡುಗಡೆ ಮಾಡಬೇಕಾಗಿದೆ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ (ತೋಟಗಾರಿಕೆ ಸಚಿವರು) :

ಅ) ಹೌದು. ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿಗೆ ಸಹಾಯಧನ ನೀಡಲಾಗುತ್ತಿದೆ.

ಆ) ಕೇಂದ್ರ ಸರ್ಕಾರದ ನೆರವಿನ ಯೋಜನೆಯು 1991–92ನೇ ವರ್ಷದಿಂದ ಜಾರಿಗೆ ಬಂದಿದೆ. ರಾಜ್ಯ ಸರ್ಕಾರದ ಸಂಪೂರ್ಣ ನೆರವಿನ ಯೋಜನೆಯು 2003–04ನೇ ವರ್ಷದಿಂದ ಜಾರಿಗೆ ಬಂದಿದೆ.

ಇ) ವಿವಿಧ ವರ್ಷಗಳಲ್ಲಿ ಸಹಾಯಧನ ಪ್ರಮಾಣವು 25% ನಿಂದ 100%ರವರೆಗೆ ಇರುತ್ತದೆ. ಅವಧಿವಾರು ಸಹಾಯಧನ ಪ್ರಮಾಣದ ವಿವರ ಕೆಳಗೆ ನೀಡಲಾಗಿದೆ.

ವರ್ಷ	ಸಹಾಯಧನ ಪ್ರಮಾಣ
1991–92 ರಿಂದ 95–96ರವರೆಗೆ	ಎಲ್ಲಾ ವರ್ಗದವರಿಗೆ 50% (ಕೇಂದ್ರ ಸರ್ಕಾರದ ಯೋಜನೆ)
1996–97 ರಿಂದ 99–2000ರವರೆಗೆ	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತಿಸಣ್ಣ ರೈತರು, ಮಹಿಳೆಯರಿಗೆ 90% ಮತ್ತು ಸಾಮಾನ್ಯ ವರ್ಗದವರಿಗೆ 70% (ಕೇಂದ್ರ ಸರ್ಕಾರದ ಯೋಜನೆ)
2000–01 ರಿಂದ 2001–02ರವರೆಗೆ	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತಿಸಣ್ಣ ರೈತರು, ಮಹಿಳೆಯರಿಗೆ 50% ಮತ್ತು ಸಾಮಾನ್ಯ ವರ್ಗದವರಿಗೆ 35% (ಕೇಂದ್ರ ಸರ್ಕಾರದ ಯೋಜನೆ)